4 'D' ಸರಕನ್ನು ಶೇಕಡ 5 ರ GST ದರದಲ್ಲಿ ಜಮ್ಮು ಮತ್ತು ಕಾಶ್ಮೀರದ ವ್ಯಾಪಾರಿಗೆ ಮಾರಿರುವುದು ₹ 5,60,000.

5 'E' ಸರಕನ್ನು ಶೇಕಡ 28 ರ GST ದರದಲ್ಲಿ ಒಬ್ಬ ನೋಂದಾಯಿತನಲ್ಲದ ವ್ಯಾಪಾರಿಗೆ ರಾಜ್ಯದಲ್ಲಿ ಮಾರಿರುವುದು ₹ 2,40,000.

6 'F' ಸರಕನ್ನು GST 12% ರಂತೆ ಒಬ್ಬ ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರನಿಗೆ ಬೆಂಗಳೂರಿನಲ್ಲಿ ಮಾರಿರುವುದು ₹ 8,00,000.

7 'G' ಸರಕನ್ನು ಒಬ್ಬ ಕೇಂದ್ರಾಡಳಿತ ಪ್ರದೇಶದಲ್ಲಿರುವ ವ್ಯಾಪಾರಿಗೆ ಶೇಕಡ 18 ರ.GST ದರದಲ್ಲಿ ಮಾರಿರುವುದು ₹ 6,00,000.

8 'H' ಸರಕನ್ನು GST ಯಿಂದ ವಿನಾಯಿತಿ ಹೊಂದಿದ್ದು ಇದನ್ನು ಪುಣೆಯಲ್ಲಿ ಒಬ್ಬ ನೋಂದಾಯಿತ ವ್ಯಾಪಾರಿಗೆ ಮಾರಿರುವುದು ₹ 10,00,000.

9 'I' ಸರಕನ್ನು ಚೀನಾ ದೇಶಕ್ಕೆ ರಫ್ತು ಮಾಡಿರುವುದು GST ಮಂಡಳಿಯು ಭಾರತದಲ್ಲಿ ಮಾರಿದರೆ ವಿಧಿಸುವ GST ದರ ಶೇಕಡ 28 ₹ 4,00,000.

10 'J' ಸರಕನ್ನು ಮೈಸೂರಿನ ವಿಶೇಷ ಆರ್ಥಿಕ ವಲಯದಲ್ಲಿರುವ ಸಂಸ್ಥೆಗೆ ಮಾರಿರುವುದು, ಇದರ GST ದರ 12% ₹ 12,00,000.

11 'K' ಸರಕನ್ನು ರಾಜ್ಯದಲ್ಲಿ ನೋಂದಾಯಿತ ವ್ಯಾಪಾರಿಗೆ ಶೇಕಡ 18 ರ GST ದರದಲ್ಲಿ ಮಾರಿವುದು ₹ 9,00,000.

12 'L' ಸರಕನ್ನು ಬೆಳಗಾವಿಯಲ್ಲಿರುವ ವ್ಯಾಪಾರಿಗೆ ಮಾರಿರುವುದು. ಈ ವ್ಯಾಪಾರಿಯು ತೆರಿಗೆ ಸಂಯೋಜನಾ ವಿಧಾನದಲ್ಲಿ ನೋಂದಾಯಿತರಾಗಿರುತ್ತಾರೆ ₹ 2,00,000 GST ದರ 28%.

10. ಈ ಕೆಳಗಿನ ವಿವರಗಳ ಸಹಾಯದಿಂದ ತೆರಿಗೆಗೊಳಪಡುವ ಸೇವೆಗಳ ಮೌಲ್ಯವನ್ನು ಮತ್ತು GST ಹೊಣೆಗಾರಿಕೆಯನ್ನು ಮಾರ್ಚ್ 2022 ಕ್ಕೆ ಕಂಡುಹಿಡಿಯಿರಿ. (ಎಲ್ಲಾ ಸೇವೆಗಳನ್ನು ಕರ್ನಾಟಕ ರಾಜ್ಯದ ಒಳಗಡೆ ಸಲ್ಲಿಸಲಾಗಿದೆ.) (CGST ಮತ್ತು SGST ಪ್ರತಿ 9%).

| ಕ್ರಮ ಸಂಖ್ಯೆ | ವಿವರಗಳು | ಮೊತ್ತ (₹) |
|---|---|---|
| 1 | ಮನೆಯನ್ನು ವಾಸಕ್ಕೆ ಬಾಡಿಗೆ ಕೊಟ್ಟಿರುವುದು | 1,20,000 |
| 2 | ಕಾರ್ಯದರ್ಶಿಯ ಲೆಕ್ಕದ ಪರಿಶೋಧನೆ | 50,000 |
| 3 | ವಿನಿಮಯ ನಿಯಂತ್ರಣ ಉದ್ದೇಶಕ್ಕಾಗಿ ಪ್ರಮಾಣೀಕರಿಸಿದ್ದು | 50,000 |
| 4 | ವ್ಯವಹಾರಿಕ ಉದ್ದೇಶಕ್ಕಾಗಿ ನೀಡಿದ ಕಟ್ಟಡದ ಬಾಡಿಗೆ | 85,000 |
| 5 | UNO ಗೆ ಸಲ್ಲಿಸಿದ ಸೇವೆಗಳು | 5,00,000 |
| 6 | ಸ್ನೇಹಿತರಿಗಾಗಿ ಸಲ್ಲಿಸಿದ ಉಚಿತ ಸೇವೆಗಳ ಬೆಲೆ | 2,50,000 |
| 7 | ಕೃಷಿ ಕಾರ್ಮಿಕ ಪೂರೈಕೆಗೆ ಸಂಬಂಧಿಸಿದಂತೆ ಸಲ್ಲಿಸಿದ ಸೇವೆಗಳು | 3,00,000 |
| 8 | ಲಿಕ್ವಿಡೇಟರ್ ಆಗಿ ಕಾರ್ಯನಿರ್ವಹಿಸಿದ್ದಕ್ಕೆ ಬಂದ ಶುಲ್ಕ | 3,50,000 |
| 9 | ಪ್ರಸಾರ ಸಂಘಟನೆಯ ಕೆಲಸಕ್ಕಾಗಿ ಸಲ್ಲಿಸಿದ ಸಮಯ | 1,50,000 |